# ಕಾರವಾರಕ್ಕೆ ಕಡಲ ಕಾಗೆ

ಈ ಜಗಳಗಂಟ ಹಕ್ಕಿ ರೈತಮಿತ್ರನೂ ಹೌದು. ಸಾವಿರಾರು ಸಂಖ್ಯೆಯಲ್ಲಿ ಹೊಲಗಳಿಗೆ ದಾಳಿ ಇಡುವ ಇವು ಮಿಡತೆಗಳನ್ನು ಸತತವಾಗಿ ಮುಕ್ಕುತ್ತವೆ!

■ ಚಿತ್ರ- ಲೇಖನ: ಪುಟ್ಟರಾಜು, ಕೈಗಾ





ಆಸ್ಟ್ರೇಲಿಯದಲ್ಲಿ ನಡೆಯುವ ಕ್ರಿಕೆಟ್ ಮ್ಯಾಚ್ ವೀಕ್ಷಿಸುವಾಗ ಆಟದ ಮೈದಾನದಲ್ಲಿ ಗುಂಪು ಗುಂಪಾಗಿ ಕಾಣಿಸುವ ಶ್ವೇತವರ್ಣದ ಹಕ್ಕಿಗಳೇ ಈ ಕಡಲ ಕಾಗೆಗಳು. ವಿಶೇಷವಾಗಿ ಬ್ಯಾಟ್‌ನಿಂದ ಸಿಡಿದ ಬಾಲ್ ಅವುಗಳ ಹತ್ತಿರ ಹೋದಾಗ ಇಲ್ಲವೇ ಫೀಲ್ಡರ್ ಬಾಲ್ ಹಿಡಿಯಲು ಮುನ್ನುಗ್ಗಿದಾಗ ಪುರ್ ಪುರ್.. ಎಂದು ಹಾರಿ ಮತ್ತೊಂದು ಜಾಗಕ್ಕೆ ಹಾರುವ ಈ ಬಿಳಿ ಬಣ್ಣದ ಕಡಲಕಾಗೆಗಳನ್ನು ಟಿವಿ ಪರದೆಯಲ್ಲಿ ನೀವೂ ನೋಡಿರುತ್ತೀರಿ.

ಈ ಪಕ್ಷಿಗಳು ಕಾರವಾರದ ಕಡಲ ತೀರದಲ್ಲಿ ಹಿಂಡು, ಹಿಂಡಾಗಿ ಜನರ ಭಯವಿಲ್ಲದೆ ಜೀವಿಸುತ್ತಿವೆ. ಮೀನುಗಾರರು ಹಿಡಿದ ಮೀನಿನೊಂದಿಗೆ ಬೋಟನ್ನು ನೀರಿನಿಂದ ದಡಕ್ಕೆ ಎಳೆದು, ಮುಂದಡಿ ಇಟ್ಟರೆ ಸಾಕು, ಪುರ್ ಎಂದು ಹಾರಿ ಹತ್ತು ಹದಿನೈದು ಮೀಟರ್ ಮುಂದಕ್ಕೆ ಕೂರುತ್ತವೆ.

ಯಾವುದೇ ರೀತಿಯಲ್ಲಿ ಇವು ಕಾಗೆಯ ಬಳಗಕ್ಕೆ ಸೇರಿಲ್ಲವಾದರೂ ಇದೊಂದು ಅನ್ವರ್ಥ ನಾಮವಾಗಿದೆಯಷ್ಟೇ. ತಲೆಯ ಭಾಗ ಕಂದು ಬಣ್ಣವಿರುವ ಈ ಪ್ರಭೇದಕ್ಕೆ, ಬ್ರೌನ್ ಹೆಡೆಡ್ ಗಲ್ (Brown headed Gull) ಎಂದು ಕರೆಯುತ್ತಾರೆ. ಕರವಳಿಯಲ್ಲಿ ಕಂಡು ಬರುವ ಇತರ ಕಡಲಕಾಗೆಗಳೆಂದರೆ ಬ್ಲಾಕ್ ಹೆಡೆಡ್ ಗಲ್ (Heuglins Gull), ಯೆಲ್ಲೋ ಲೆಗ್ಗೆಡ್ ಪಲ್ಲಾಸ್ ಗಲ್ ಮತ್ತು ಸ್ಲೆಂಡರ್ ಬಿಲ್ಡ್ ಗಲ್.

ಚಳಿಗಾಲದಲ್ಲಿ ಕಡಲ ತೀರಕ್ಕೆ ವಲಸೆ ಬರುವ ಈ ಕಡಲ ಕಾಗೆಗಳ ಉದ್ದ ಸಾಧಾರಣ 470 ಮಿ.ಮೀ. ಗಂಡು ಮತ್ತು ಹೆಣ್ಣು ನೋಡಲು ಒಂದೇ ತರಹ. ಇದರ ಹೆಸರು ಕಂದು ಬಣ್ಣದ ಕಾಗೆಯಾದರೂ, ಆ ಕಂದು ತಲೆಯನ್ನು ಕೇವಲ ವಂಶಾಭಿವೃದ್ಧಿಯ ಸಮಯದಲ್ಲಷ್ಟೇ ನೋಡಲು ಸಾಧ್ಯ. ವಂಶಾಭಿವೃದ್ಧಿಯ ಸಮಯವಾದ ಜೂನ್ ತಿಂಗಳಿಂದ ಆಗಸ್ಟ್ ತಿಂಗಳವರೆಗೂ ತಲೆಗೆ ಕಂದು ಬಣ್ಣ!

ಇದು ಅತ್ಯುತ್ತಮ ಈಜುಗಾರ ಹಕ್ಕಿ. ಸಮುದ್ರದ ಮೇಲೆ ಹಾರಾಡುತ್ತಾ ಬೇಟೆಯಾಡಲು ನೀರಿಗಿಳಿದರೆ, ಕ್ಷಣ ಮಾತ್ರದಲ್ಲಿ ಎಂತಹ ಪ್ರಕ್ಷುಬ್ಧ ಅಲೆಗಳ –ವಾತಾವರಣವಿದ್ದರೂ ಮೀನು ಬೇಟೆಯಾಡಬಲ್ಲ ಚತುರ ಬೇಟೆಗಾರ. ಇದರ ಮೆನು ಲಿಸ್ಟ್‌ನಲ್ಲಿ ಮೀನು, ಬಳಚು, ಏಡಿ, ಸೀಗಡಿ ಮತ್ತು ಸಮುದ್ರ ಸಸ್ಯಗಳು ಸೇರಿವೆ.

ಇದರ ಬುದ್ಧಿವಂತಿಕೆಯೂ ಗಮನ ಸೆಳೆಯುತ್ತದೆ. ಬಳಚು ಮತ್ತು ಇನ್ನಿತರ ಗಟ್ಟಿಯಾದ ಹೊರಕವಚ ಇರುವಂತಹ ಜೀವಿಯನ್ನು (Clams &